**ಎಂಟನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಮೈಸೂರು, ಹುಣಸೂರು ಪೀಠ.**

**SC No**.437/2022

**PW**. 11

**CW**. 24

**ಸಾಕ್ಷಿಯ ಹೆಸರು –ಲೋಕೇಶ**

**ತಂದೆಯ ಹೆಸರು –ಲೇ ರಾಮಯ್ಯ**

**ವಯಸ್ಸು –42 ವರ್ಷಗಳು**

ದಿನಾಂಕ 05–01–2026 ರಂದು ಪ್ರಮಾಣವಚನ ಬೋಧಿಸಲಾಯಿತು.

**ಉದ್ಯೋಗ –ವ್ಯವಸಾಯ**

**ವಾಸಸ್ಥಳ –ರಾಮಪುರ, ಸಾಲಿಗ್ರಾಮ**

**ಮುಖ್ಯ ವಿಚಾರಣೆಃ– ಸರ್ಕಾರಿ ಅಭಿಯೋಜಕರಿಂದಃ–**

ಮೃತ ಗೋಪಿಕೃಷ್ಣ ಗೊತ್ತು. ಈಗ್ಗೆ 7 ವರ್ಷಗಳ ಹಿಂದೆ ಗೋಪಿಕೃಷ್ಣ ಜಮೀನಿನಲ್ಲಿ ಮರಕ್ಕೆ ಆತ್ಮಹತ್ಯೆ ಮಾಡಿಕೊಂಡು ಮೃತಪಟ್ಟಿರುತ್ತಾರೆ. 2021 ನೇ ಸಾಲಿನಲ್ಲಿ ಗೋಪಿಕೃಷ್ಣನ ವಿವೋ ಮೊಬೈಲ್ ಅನ್ನು ಪೊಲೀಸರು ಠಾಣೆಯಲ್ಲಿ ನಮ್ಮ ಸಮಕ್ಷಮ ಜಪ್ತಿ ಮಾಡಿ ಪಂಚನಾಮೆ ಮಾಡಿ ನನ್ನ ಸಹಿ ಪಡೆದರು. ಸದರಿ ಮೊಬೈಲ್ ನಲ್ಲಿ 1 ನೇ ಆರೋಪಿ ಮತ್ತು ಮೃತನ ನಡುವೆ ಆಗಿರುವ ಆಡಿಯೋ ರೆಕಾರ್ಡಿಂಗ್ ಗಳು ಮತ್ತು ಮೇಸೆಜ್ ಗಳು ಇವೆ ಎಂದು ಪೊಲೀಸರು ಹೇಳಿದರು. ಸದರಿ ಪಂಚನಾಮೆಯನ್ನು ಈಗಾಗಲೇ ನಿಪಿ–2 ಎಂದು ಗುರುತಿಸಿದ್ದು, ಸಾಕ್ಷಿಯ ಸಹಿಯನ್ನು ನಿಪಿ–2(ಬಿ) ಎಂದು ಗುರುತಿಸಲಾಯಿತು. ಸದರಿ ಪಂಚನಾಮೆಗೆ ಚಾಸಾ–25 ರವರು ಸಹಿ ಮಾಡಿದ್ದಾರೆ. ಸದರಿ ಮೊಬೈಲ್ ಅನ್ನು ಈಗ ನ್ಯಾಯಾಲಯದ ಮುಂದೆ ತೆರೆದು ನೋಡುತ್ತಿದ್ದು , ಅದನ್ನು ಮು.ಮಾ–2 ಎಂದು ಗುರುತಿಸಲಾಯಿತು.

**SC No.437/2022**
**PW. 11**

**ಪಾಟೀಸವಾಲುಃ– ಆರೋಪಿತರ ಪರ ಶ್ರೀ ಈ ಬಿ ಆರ್ ವಕೀಲರಿಂದಃ–**

ಪಂಚನಾಮೆಗೆ ಬರಲು ಪೊಲೀಸರು ನೋಟೀಸ್ ನೀಡಿಲ್ಲ ಎಂದರೆ ಸರಿ. ನಿಪಿ–2 ರಲ್ಲಿ ಬರೆದಿರುವ ವಿಚಾರಗಳು ನಾನು ಓದಿ ತಿಳಿದಕೊಂಡಿಲ್ಲ ಎಂದರೆ ಸರಿ. ನನ್ನ ಸಮಕ್ಷಮ ಯಾವುದೇ ವಾಬೈಲ್ ಅನ್ನು ಜಪ್ತಿ ಮಾಡಿಲ್ಲ ಮತ್ತು ಪಂಚನಾಮೆ ಮಾಡಿಲ್ಲ ಎಂದರೆ ಸರಿಯಲ್ಲ. ಫಿರ್ಯಾದುದಾರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಪಂಚನಾಮೆಗೆ ಚಾಸಾ–25 ರವರು ಸಹಿ ಮಾಡಿದ್ದಾರೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ** ಇಲ್ಲ.

**ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.**

ಓ ಹೇ ಕೇ ಸರಿ ಇದೆ ಎಂದು ಒಪ್ಪಿದ ಮೇರೆಗೆ,

ಎಂಟನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಮೈಸೂರು, ಹುಣಸೂರು ಪೀಠ.